ಹೊರಜಗತ್ತಿನ ಸಂಪರ್ಕವಿಲ್ಲದೆ ಸ್ವಲ್ಪ ಉದಾಸದಲ್ಲಿರುತಾಳೆ. ಅದೇ ಟೈಮ್‌ಗೆ ನ್ಯಾಷನಲ್ ಜಿಯಾಗ್ರಫಿಗಾಗಿ, ಮ್ಯಾಡಿಸನ್‌ಕೌಂಟಿಯಲ್ಲಿರುವ ಸೇತುವೆಗಳ ಫೋಟೊಶೂಟ್ ಮಾಡಲಿಕ್ಕೆಂದು ಬಂದ ಫೋಟೊಗ್ರಾಫರೊಬ್ಬನ ಪ್ರವೇಶವಾಗುತ್ತೆ. ಹೆಂಡತಿ ಮತ್ತು ಫೋಟೊಗ್ರಾಫರನ ನಡುವೆ, ಅವಳ ಗಂಡ ಮತ್ತು ಮಕ್ಕಳಿಲ್ಲದ ನಾಲ್ಕು ದಿವಸಗಳ ಗಡುವಿನಲ್ಲಿ ಒಂದು ಟಾರಿಡ್ ಅಫೇರ್ ನಡೆದುಬಿಡುತ್ತೆ. ನಾಲ್ಕು ಗೋಡೆಗಳ ನಡುವಿನದಷ್ಟೇ ಬದುಕು ಅಂದುಕೊಂಡು ಬದುಕುತ್ತಿದ್ದವಳನ್ನು ಈ ಫೋಟೊಗ್ರಾಫರ್ ತನ್ನ ಟೂರು–ಟ್ರಾವೆಲುಗಳ ನಡುವೆ, ಇಡೀ ಜಗತ್ತಿನಿಂದ ಹೆಕ್ಕಿ ತಂದ ಕತೆಗಳನ್ನು ಹೇಳಿ ಹುರುಪೆಬ್ಬಿಸಿಬಿಡುತ್ತಾನೆ. ಹುರಿದುಂಬಿಸುತಾನೆ... ಅವಳನ್ನು ತನ್ನ ಕ್ಯಾಮೆರಾಗಣ್ಣುಗಳಲ್ಲಿ ಹತ್ತಾರು ಕೋನಗಳಲ್ಲಿ ಬಂಧಿಸಿ ಬದಿಗಿಡುತ್ತಾನೆ... ಅವಳು ಪಂಜರ ತಪ್ಪಿ ಹೊರಬಂದ ಹಕ್ಕಿಯ ಹಾಗೆ ಹುಚ್ಚೆದ್ದು ಹಾರುತ್ತಾಳೆ. ಹಾರಿಯೇ ಹಾರುತ್ತಾಳೆ... ನಾಲ್ಕನೇ ದಿವಸ, ಗಂಡಮಕ್ಕಳು ಸಿಟಿಗೆ ಹೋದವರು ವಾಪಸು ಬರಲಿಕ್ಕಿದ್ದಾರೆ... ಆಗ ಸುರುಗೊಳ್ಳುತ್ತೆ ಪೇಚಾಟ! ಅದೇನು ತುಮುಲ ಗೊತ್ತೆ? ಸೈಕ್ಲೋನಿನ ಸುಮಾರಿನ ಕಡಲ ತಳಮಳ ಅದು... ಜಡಿಮಳೆಯ ಹಗಲುಗಳ ಆಕಾಶದ ಉಮ್ಮಳ! ಸರಿ... ಗಂಡಮಕ್ಕಳು ವಾಪಸು ಬರುವ ಮೊದಲು ಇಬ್ಬರೂ ಓಡಿಹೋಗೋದೆಂದು ಪ್ಲ್ಯಾನ್ ಮಾಡುತ್ತಾರೆ... ಮಾರನೆಯ ಮುಂಜಾನೆ ಕೌಂಟಿಯಲ್ಲಿನ ಸೇತುವೆಯೊಂದರ ಆಚೆ ಬದಿಯಲ್ಲಿ –ಫೋಟೊಗ್ರಾಫರ್ ಒಂದು ನಿರ್ದಿಷ್ಟ ವೇಳೆಯಲ್ಲಿ ಕಾಯುತ್ತಿರುವುದೆಂದು ಒಡಂಬಡಿಕೆಯಾಗಿರುತ್ತೆ... ಮುಂದಿನ ಕತೆ ಮತ್ತೂ ತುಯ್ದಾಟದ್ದು... ವಿವಾಹಿತ ಹೆಣ್ಮನಸ್ಸಿನ ಹೊಯ್ದಾಟದ್ದು... ಹೋಗುವುದೋ ಬೇಡವೋ– ಹೋಗುವುದೋ ಬೇಡವೋ ಅನ್ನೋ ತಲ್ಲಣದ ನಡುವೆ, ಹೆಂಡತಿಯಾದವಳು, ಕಡೆಗೂ ತಾನಿಲ್ಲದ ಸನ್ನಿವೇಶದಲ್ಲಿ ತನ್ನ ಮಕ್ಕಳಿಗೇನಾಗಬಹುದು ಅನ್ನೋ ಸಂದಿಗ್ಧದಲ್ಲಿ, ಹೊರಹೋಗದೆ ವಾಪಸು ನಿಲ್ಲುತಾಳೆ... ಇದು ಕತೆ. ಅವಳು ದಾಟದೆ ಉಳಿಸಿದ ಸೇತುವೆಯ ಕತೆ!'

'.....'

'ಏನನಿಸುತ್ತೆ?'

'ಕತೆಗಿಂತ ನೀವದನ್ನು ಹೇಳಿದ್ದು ಚೆನ್ನಿತ್ತು, ಈಶ್... ಎಷ್ಟು ಚೆನ್ನಾಗಿ ಹೇಳಿದಿರಿ ಗೊತ್ತೆ?'

'ಕಮ್ಮಾನ್... ಯು ಆರ್ ಎ ರೈಟರ್! ನಿನ್ನೆದುರಿಗೆ ನನ್ನದೇನು ಹೇಳು...'

'ಯೆಸ್ಸ್, ಐ ಮೀನಿಟ್.... ನಾನಲ್ಲ, ನೀವೊಬ್ಬ ರೈಟರ್ ಆಗಿರಬೇಕಿತ್ತು... ಯು ನೆರೇಟ್ ತಿಂಗ್ಸ್ ಸೋ ವೆಲ್!!'

'ಆಹ್ಹ್! ನೀನೇನು ತಮಾಷೆ ಮಾಡುತೀಯಾ?!'

'ಸರಿ ಬಿಡಿ... ಅದಿರಲಿ, ಕನಕದುರ್ಗೆ ಹೇಗಿದ್ದಾರೆ? ಆಲ್ ವೆಲ್ ಆನ್ ದಟ್ ಫ್ರಂಟ್?'

'ಆ ಬಗ್ಗೆ ಏನು ಹೇಳೋದು, ಚಿರಾಗ್... ನಿನಗೆ ಗೊತ್ತೇ ಇದೆಯಲ್ಲ... ಯಾವ ಶತ್ರುಗೂ ಈ ಪರಿ ಆಗೋದು ಬೇಡ. ಶಿ ಈಸ್ ಸ್ಟಿಲ್ ಅ ವೆಜಿಟಬಲ್ ಅಷ್ಟೆ... ಜೀವಂತಶವ ಅಷ್ಟೆ... ಗೊಂಬೆ ಥರ ಇದ್ದಾಳೆ. ಆದಷ್ಟು ಬೇಗ ಅವಳು ಈ ಮರ್ತ್ಯದ ಬದುಕು ದಾಟಿಕೊಳ್ಳಲಿ ಅನ್ನೋದಷ್ಟೇ ಹಾರೈಕೆ...' ಅಂತಂದು ನಿಟ್ಟುಸಿರಿಡುವಾಗ, ಚಿರಾಗ್, 'ಈಶ್... ಈಶ್... ಬಾಗಿಲಲ್ಲಿ ಯಾರೋ ಬೆಲ್ ಮಾಡುತಾ ಇದ್ದಾರೆ. ವಿಲ್ ಗೆಟ್ ಬ್ಯಾಕ್ ಸೂನ್...' ಅಂತಂದು ಫೋನು ಕಡಿದ.

★★★

ನಾನು, ಕನಕದುರ್ಗೆ ನಾಗಪುರದಲ್ಲಿರುವ ಆರ್ಕಿಟೆಕ್ಚರ್ ಶಾಲೆಯ ಸಹಪಾಠಿಗಳು. ಓದಿನ